ನ-72 (76)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ನಿಯಮ 72 ರಡಿ ಮಂಡಿಸಿರುವ ಸೂಚನಾ ಪತ್ರಕ್ಕೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಹೇಳಿಕೆ.**

ವಿಷಯ: ಗ್ರಾಮಠಾಣಾ ನಿವೇಶನ ಖಾತಾ ಸಂಖ್ಯೆ:104, ಈ-ಸ್ವತ್ತಿನ ಸಂಖ್ಯೆ:150300701901100141 ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಹ್ಯಾಡಾಳು ಗ್ರಾಮ, ಗೊಲ್ಲಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ನಿವೇಶನದಲ್ಲಿ ಅನಧಿಕೃತವಾಗಿ ಯಾವುದೇ ಅಧಿಸೂಚನೆ ನೀಡದೆ ಪಂಚಾಯಿತಿ ನಿರ್ಣಯವಾಗದೆ ರಸ್ತೆ ನಿರ್ಮಾಣ ಮಾಡಿದ್ದು ಕಂಡು ಬಂದಿದ್ದು, ಭೂ ಮಾಫಿಯಾದೊಂದಿಗೆ ಗ್ರಾಮ ಪಂಚಾಯಿತಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ಕಾರ್ಯದರ್ಶಿಗಳು ಕೈ ಜೋಡಿಸಿ ಅನಧಿಕೃತವಾಗಿ ರಸ್ತೆ ನಿರ್ಮಾಣ ಮಾಡಿದ್ದು, ಈ ನಿವೇಶನ ಕಳೆದುಕೊಂಡ ಸ್ವತ್ತಿನ ಮಾಲೀಕರಿಗೆ ಪರಿಹಾರ ನೀಡುವ ಬಗ್ಗೆ.

ಉತ್ತರ: ಸ್ವತ್ತಿನ ಮಾಲೀಕರಾದ ಶ್ರೀ ಹರೀಶ್ ಎಂಬುವವರು ತಮ್ಮ ಸ್ವತ್ತಿನಲ್ಲಿ ಅನಧಿಕೃತವಾಗಿ ರಸ್ತೆ ನಿರ್ಮಾಣ ಮಾಡಿ ಹಾಗೂ ಅತಿಕ್ರಮವಾಗಿ ಪ್ರವೇಶ ಮಾಡಿ ಜಲ್ಲಿ ಕಲ್ಲು, ಮರಳು, ಸಿಮೆಂಟ್, ಇತರೆ ವಸ್ತುಗಳನ್ನು ಹಾಕಿರುವುದಾಗಿ ದೂರು ಅರ್ಜಿಯನ್ನು ದಿನಾಂಕ:21.09.2020 ರಂದು ಗೊಲ್ಲಹಳ್ಳಿ ಗ್ರಾಮ ಪಂಚಾಯಿತಿಗೆ ಸಲ್ಲಿಸಿರುತ್ತಾರೆ. ಅದೇ ದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಲಾಗಿ ಭೌತಿಕವಾಗಿ ಮಣ್ಣಿನ ರಸ್ತೆ ಇರುವುದು ಕಂಡು ಬಂದಿರುತ್ತದೆ. ಆದರೆ ಅವರ ನಿವೇಶನದಲ್ಲಿ ಯಾವುದೇ ಜಲ್ಲಿ ಕಲ್ಲು, ಮರಳು ಸಿಮೆಂಟ್, ಇತರೆ ವಸ್ತುಗಳನ್ನು ಹಾಕಿರುವುದು ಕಂಡುಬಂದಿರುವುದಿಲ್ಲ.

ಸ್ಥಳೀಯ ಸಾರ್ವಜನಿಕರಲ್ಲಿ ವಿಚಾರ ಮಾಡಲಾಗಿ ಅವರುಗಳು ಸಹಿತ ಯಾವುದೇ ಸ್ಪಷ್ಟ ಮಾಹಿತಿಯನ್ನು ನೀಡಿರುವುದಿಲ್ಲ ಹಾಗೂ ಗ್ರಾಮ ಪಂಚಾಯಿತಿ ವತಿಯಿಂದ ಯಾವುದೇ ಕಾನೂನು ಬಾಹಿರವಾಗಿ ರಸ್ತೆ ನಿರ್ಮಾಣ ಮಾಡಿರುವುದಿಲ್ಲ ಮತ್ತು ಗ್ರಾಮ ಪಂಚಾಯಿತಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಲಿ ಮತ್ತು ಕಾರ್ಯದರ್ಶಿಯಾಗಲಿ ಭೂ ಮಾಫಿಯಾದೊಂದಿಗೆ ಕೈ ಜೋಡಿಸಿ ಅಂತಹ ಕೃತ್ಯಕ್ಕೆ ಸಹಕಾರ ನೀಡಿರುವುದಿಲ್ಲ.

ಶ್ರೀ ಹರೀಶ್ ಕುಮಾರ್ ರವರ ಸ್ವತ್ತಿನಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಿಂದಾಗಲೀ ಅಥವಾ ತಾಲ್ಲೂಕು ಪಂಚಾಯಿತಿ/ಗ್ರಾಮ ಪಂಚಾಯಿತಿ ಅನುದಾನದಿಂದಾಗಲೀ ರಸ್ತೆ ಕಾಮಗಾರಿ ನಿರ್ಮಾಣ ಮಾಡಿರುವುದಿಲ್ಲ.

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಸಂಖ್ಯೆ. ಗ್ರಾಅಪ 761 ಗ್ರಾಪಂಅ 2020.